ನೀವು ನಮಾಝ್ ಮಾಡುವಾಗ ನಿಮ್ಮ ಸಾಲುಗಳನ್ನು ನೇರಗೊಳಿಸಿರಿ. ನಂತರ ನಿಮ್ಮಲ್ಲೊಬ್ಬರು ನಮಾಝ್ಗೆ ಇಮಾಮತ್ (ಮುಂದಾಳುತ್ವ) ವಹಿಸಲಿ. ಅವರು ತಕ್ಬೀರ್ ಹೇಳಿದರೆ ನೀವು ಕೂಡ ತಕ್ಬೀರ್ ಹೇಳಿರಿ

ಹಿತ್ತಾನ್ ಬಿನ್ ಅಬ್ದುಲ್ಲಾ ರಕಾಶಿ ಹೇಳುತ್ತಾರೆ: ನಾನು ಅಬೂ ಮೂಸಾ ಅಶ್ಅರಿ ಯವರೊಂದಿಗೆ ನಮಾಝ್ ನಿರ್ವಹಿಸಿದೆ. ನಾವು ಕೊನೆಯ ಕೂರುವಿಕೆಗೆ ತಲುಪಿದಾಗ, ಹಿಂದಿನ ಸಾಲಿನಲ್ಲಿದ್ದ ಒಬ್ಬ ವ್ಯಕ್ತಿ ಹೇಳಿದರು: "ನಮಾಝನ್ನು ಒಳಿತು ಮತ್ತು ಝಕಾತ್ಗಳ ಜೊತೆಗೆ ಕಡ್ಡಾಯಗೊಳಿಸಲಾಗಿದೆ." ಅಬೂ ಮೂಸಾರವರು ನಮಾಝ್ ಮುಗಿಸಿದ ನಂತರ ಹಿಂದೆ ತಿರುಗಿ ಕೇಳಿದರು: "ಇಂತಿಂತಹ ಮಾತನ್ನು ಹೇಳಿದ್ದು ಯಾರು?" ಜನರು ಮೌನವಾಗಿದ್ದರು. ಅವರು ಪುನಃ ಕೇಳಿದರು: "ಇಂತಿಂತಹ ಮಾತನ್ನು ಹೇಳಿದ್ದು ಯಾರು?" ಜನರು ಮೌನವಾಗಿದ್ದರು. ಅವರು ಕೇಳಿದರು: "ಹಿತ್ತಾನ್! ಬಹುಶಃ ನೀನೇ ಇದನ್ನು ಹೇಳಿರಬಹುದು." ಹಿತ್ತಾನ್ ಹೇಳಿದರು: "ನಾನು ಹೇಳಿಲ್ಲ. ನೀವು ಅದಕ್ಕಾಗಿ ನನ್ನನ್ನು ಗದರಿಸುವಿರೆಂದು ನನಗೆ ಭಯವಿತ್ತು." ಆಗ ಜನರ ನಡುವಿನಿಂದ ಒಬ್ಬ ವ್ಯಕ್ತಿ ಹೇಳಿದರು: "ನಾನೇ ಅದನ್ನು ಹೇಳಿದ್ದು. ಆದರೆ ನನ್ನ ಉದ್ದೇಶ ಒಳ್ಳೆಯದಾಗಿತ್ತು." ಆಗ ಅಬೂ ಮೂಸಾ ಹೇಳಿದರು: "ನೀವು ನಮಾಝಿನಲ್ಲಿ ಹೇಗೆ ಮಾತನಾಡಬೇಕೆಂದು ನಿಮಗೆ ತಿಳಿದಿದೆಯೇ? ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಒಮ್ಮೆ ಪ್ರವಚನ ಮಾಡುತ್ತಾ, ನಮಗೆ ಚರ್ಯೆಗಳನ್ನು ವಿವರಿಸಿದರು ಮತ್ತು ನಮಾಝನ್ನು ಕಲಿಸಿದರು. ನಂತರ ಅವರು ಹೇಳಿದರು: "ನೀವು ನಮಾಝ್ ಮಾಡುವಾಗ ನಿಮ್ಮ ಸಾಲುಗಳನ್ನು ನೇರಗೊಳಿಸಿರಿ. ನಂತರ ನಿಮ್ಮಲ್ಲೊಬ್ಬರು ನಮಾಝ್ಗೆ ಇಮಾಮತ್ (ಮುಂದಾಳುತ್ವ) ವಹಿಸಲಿ. ಅವರು ತಕ್ಬೀರ್ ಹೇಳಿದರೆ ನೀವು ಕೂಡ ತಕ್ಬೀರ್ ಹೇಳಿರಿ. ಅವರು, "ಗೈರಿಲ್ ಮಗ್ದೂಬಿ ಅಲೈಹಿಂ ವಲದ್ದಾಲ್ಲೀನ್" ಎಂದು ಹೇಳಿದರೆ, ನೀವು "ಆಮೀನ್" ಎಂದು ಹೇಳಿರಿ. ಆಗ ಅಲ್ಲಾಹು ನಿಮಗೆ ಉತ್ತರಿಸುವನು. ಇಮಾಂ ತಕ್ಬೀರ್ ಹೇಳಿದರೆ ನೀವು ಕೂಡ ತಕ್ಬೀರ್ ಹೇಳಿರಿ. ಅವರು ರುಕೂ ಮಾಡಿದರೆ ನೀವೂ ರುಕೂ ಮಾಡಿರಿ. ಇಮಾಂ ನಿಮಗಿಂತ ಮೊದಲು ರುಕೂ ಮಾಡುತ್ತಾರೆ ಮತ್ತು ನಿಮಗಿಂತ ಮೊದಲು ತಲೆ ಎತ್ತುತ್ತಾರೆ." ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಅದು ಅದಕ್ಕೆ ಸಮವಾಗಿದೆ. ನಂತರ ಇಮಾಂ "ಸಮಿಅಲ್ಲಾಹು ಲಿಮನ್ ಹಮಿದ" ಎಂದು ಹೇಳಿದರೆ, ನೀವು "ಅಲ್ಲಾಹುಮ್ಮ ರಬ್ಬನಾ ವಲಕಲ್ ಹಮ್ದ್" ಎಂದು ಹೇಳಿರಿ. ಅಲ್ಲಾಹು ನಿಮ್ಮ ಪ್ರಾರ್ಥನೆಗೆ ಉತ್ತರಿಸುವನು. ಅಲ್ಲಾಹು ಅವನ ಪ್ರವಾದಿಯ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಾಲಗೆಯ ಮೂಲಕ ಹೇಳಿದನು: "ಅಲ್ಲಾಹು ಅವನನ್ನು ಪ್ರಶಂಸಿಸುವವರ ಮಾತನ್ನು ಕೇಳುತ್ತಾನೆ." ಇಮಾಂ ಅಲ್ಲಾಹು ಅಕ್ಬರ್ ಎಂದು ಹೇಳಿ, ಸುಜೂದ್ ಮಾಡಿದರೆ, ನೀವು ಕೂಡ ಅಲ್ಲಾಹು ಅಕ್ಬರ್ ಎಂದು ಹೇಳಿ ಸುಜೂದ್ ಮಾಡಿರಿ. ಇಮಾಂ ನಿಮಗಿಂತ ಮೊದಲು ಸುಜೂದ್ ಮಾಡುತ್ತಾರೆ ಮತ್ತು ನಿಮಗಿಂತ ಮೊದಲು ತಲೆ ಎತ್ತುತ್ತಾರೆ." ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಅದು ಅದಕ್ಕೆ ಸಮವಾಗಿದೆ. ನೀವು ಕೂರುವ
ಸ್ಥಿತಿಗೆ ತಲುಪಿದಾಗ ನಿಮ್ಮ ಪ್ರಪ್ರಥಮ ಮಾತು ಇದಾಗಿರಲಿ: "ಅತ್ತಹಿಯ್ಯಾತು ಅತ್ತಯ್ಯಿಬಾತು ಅಸ್ಸಲವಾತು ಲಿಲ್ಲಾಹಿ, ಅಸ್ಸಲಾಮು ಅಲೈಕ ಅಯ್ಯುಹನ್ನಬಿಯ್ಯು ವರಹ್ಮತುಲ್ಲಾಹಿ ವಬರಕಾತುಹು, ಅಸ್ಸಲಾಮು ಅಲೈನಾ ವಅಲಾ ಇಬಾದಿಲ್ಲಾಹಿ ಸ್ಸಾಲಿಹೀನ್. ಅಶ್ಹದು ಅನ್ ಲಾ ಇಲಾಹ ಇಲ್ಲಲ್ಲಾಹು ವ ಅಶ್ಹದು ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹು." [صحيح] [رواه مسلم]

ಅಬೂ ಮೂಸಾ ಅಶ್ಅರಿ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ನಮಾಝ್ ಮಾಡಿದರು. ಅವರು ತಶಹ್ಹುದ್ಗಾಗಿ ಕೂರುವ ಹಂತಕ್ಕೆ ತಲುಪಿದಾಗ, ಹಿಂದಿನಿಂದ ಒಬ್ಬ ವ್ಯಕ್ತಿ, "ಕುರ್ಆನಿನಲ್ಲಿ ನಮಾಝನ್ನು ಒಳಿತು ಮತ್ತು